# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ. 185/2021

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ನರೇಶ್ | ಸಿಡಬ್ಲ್ಯೂ-7 | ಪಿಡಬ್ಲ್ಯೂ-8 |
| ತಂದೆಯ/ಗಂಡನ ಹೆಸರು | ಹಣಮಂತ | | |
| ವಯಸ್ಸು | 23 ವರ್ಷ | | |
| ಉದ್ಯೋಗ | ಕೂಲಿ | | |
| ವಾಸ ಸ್ಥಳ | ಹಲಕೋಡ ಗ್ರಾಮ, ತಾಃ ಚಿಂಚೋಳಿ | | |

ದಿನಾಂಕ 21-06-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಮೃತ ಪಾಂಡು ನನ್ನ ಅಣ್ಣ. ಅವರು ಈಗ ಜೀವಿತ ಇರುವುದಿಲ್ಲ. ಅವರು ಯಾವ ಕಾರಕ್ಕಾಗಿ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಅವರ ಮರಣದ ಕಾರಣ ನನಗೆ ಯಾರು ತಿಳಿಸಿಲ್ಲ. ಆರೋಪಿಯ ಪರಿಚಯ ಇರುತ್ತದೆ. ಘಟನೆಯ ಬಗ್ಗೆ ನನಗೆ ಏನು ಗೊತ್ತಿಲ್ಲ. ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 06.09.2020 ರಂದು ಬೆಳಗಿನ 02.30 ಗಂಟೆಗೆ ನಾನು ಮನೆಯಲ್ಲಿ ಮಲಗಿಕೊಂಡ್ದಾಗ ಮಾಣಿಕರೆಡ್ಡಿ ಎಂಬುವವರು ನನಗೆ ಫೋನ ಮಾಡಿ ದಿನಾಂಕ 05.09.2020 ರಂದು ರಾತ್ರಿ 08.30 ಗಂಟೆಗೆ ಅವರ ಹೊಲ ಸರ್ವೇ ನಂ.111/2 ರಲ್ಲಿ ಟ್ರಾಕ್ಟರದಿಂದ ಹೊಲ ಉಳುಮೆ ಮಾಡುವಾಗ ಸದರಿ ಪಾಂಡು ಇತ ಟ್ರಾಕ್ಟರದ ಹಿಂದುಗಡೆ ಇರುವ ರೊಟರವೇಟರ ಮಷಿನದಲ್ಲಿ ಸಿಕ್ಕಿಬಿದ್ದು ಮೃತಪಟ್ಟಿರುತ್ತಾನೆ ಅಂತಾ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆಗ ನಾನು ಸದರಿ ವಿಷಯವನ್ನು ಚಾಸಾ-1 ಇವರಿಗೆ ತಿಳಿಸಿ, ವಿಚಾರಿಸಲಾಗಿ ರಾತ್ರಿ 08.30 ಗಂಟೆ ಸುಮಾರಿಗೆ ಹೆಸರಿನ ಬೆಳೆ ರಾಶಿ ಮಾಡುತ್ತಿರುವಾಗ ತಮ್ಮ ಹೊಲದ ಹತ್ತಿರ ಇರುವ ಮಾಣಿಕರೆಡ್ಡಿ ಇವರು ತಮ್ಮ ಹೊಲದಲ್ಲಿ ಟ್ರಾಕ್ಟರ ಉಳುಮೆ ಮಾಡುತ್ತಿದ್ದರು, ಮಾಣಿಕರೆಡ್ಡಿ ಟ್ರಾಕ್ಟರ ನಡೆಸುತ್ತಿದ್ದರು, ಆಗ ರೋಟರ ಮಷಿನ ಟ್ರಾಕ್ಟರ ಹಿಂದುಗಡೆ ಪಾಂಡು ಇತನು ಸಿಕ್ಕಿಬಿದ್ದು ಚಿರಾಡುವಾಗ ನಾವೆಲ್ಲರೂ ಸಪ್ಪಳ ಕೇಳಿ ಹೋಗಿ ನೋಡಿದ್ದು ಅವನು ಮಷಿನದಲ್ಲಿ ಸಿಕ್ಕಿಬಿದ್ದು ತಲೆಗೆ ಮತ್ತು ಬೆನ್ನಿಗೆ, ಮೈತುಂಬಾ

ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ ಅಂತಾ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ-1 ರವರ ಜೊತೆಗೆ ಹೊಲಕ್ಕೆ ಹೋಗಿ ನೋಡಿದ್ದು ಸಂಗತಿ ನಿಜವಿತ್ತು ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ನಿರ್ಲಕ್ಷತನ ಅಂದರೆ ತನ್ನ ಹೊಲ ಉಳುಮೆ ಮಾಡುವಾಗ ಹೊಲ ಗಟ್ಟಿಯಾಗಿದೆ ಅಂತಾ ನಿರ್ಲಕ್ಷತನದಿಂದ ಪಾಂಡು ಇತನನ್ನು ಟ್ರಾಕ್ಟರಗೆ ಅಳವಡಿಸಿದ ರೊಟರ ಮಷಿನ ಮೇಲೆ ನಿಲ್ಲಿಸಿ ಟ್ರಾಕ್ಟರದಿಂದ ತನ್ನ ಹೊಲ ಉಳುಮೆ ಮಾಡುವಾಗ ಪಾಂಡು ರೊಟರ ಮಸಿನಗೆ ಸಿಕ್ಕಿಹಾಕಿಕೊಂಡು ಭಾರಿ ರಕ್ತಗಾಯವಾಗಿ ಮೃತಪಟ್ಟಿರುತ್ತಾನೆ ಅಂತಾ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-9 ಎಂದು ಗುರುತಿಸಲಾಗಿಯಿತು. ನಿಪಿ-9 ರಂತೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯವಾಗುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** ಆರೋಪಿ ಪರ ಶ್ರೀ ಎನ್ ಆರ್ ವಕೀಲರಿಂದ

ಇಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ.ಸರಿ ಇದೆ.

ಪ್ರ. ದ. ನ್ಯಾ ದಂ. ಸೇಡಂ.

Accused is present.

Counsel for accused present.

CW–7 is present and examined as PW–8. Counsel for accused submits that no cross examination from the defence.

Reissue WS to CW–15.

Call on 10.07.2024

***Civil Judge, Sedam.***